ಬರುವ ಹುಡುಗಿಯರು ಹೇಗೆ ಸುಂದರೇಶ್, ರಾಜಾರಾಮ್, ಮತ್ತಿತರ ತಂತ್ರಜ್ಞರ ಕಾಮದಾಹಕ್ಕೆ ಬಲಿಯಾಗುತ್ತಾರೆನ್ನುವುದನ್ನು ಪ್ರೇಮಾವತಿಯ ಪ್ರಕರಣ ತೋರಿಸುತ್ತದೆ. ಒಂದು ರಾತ್ರಿಗೆ ಒಂದು ಸಾವಿರ ರೂಪಾಯಿ ಪಡೆದು ಯಾರ ಜತೆಗಾದರೂ ಪಾಪಪ್ರಜ್ಞೆ ಇಲ್ಲದೆ ಹಾಸಿಗೆ ಹಂಚಿಕೊಳ್ಳಬಲ್ಲ ಸಣ್ಣಂಗಿ ಅಥವಾ ವಿದ್ಯುಲ್ಲತಾಳಂತಹ ಸ್ವಚ್ಛಂದ ಹೆಣ್ಣುಗಳು ಇಲ್ಲಿದ್ದಾರೆ. ಎಲ್ಲ ನಿರ್ಮಾಪಕ ನಿರ್ದೇಶಕರೂ ಸ್ತ್ರೀಲೋಲರಾಗಿರುವುದಿಲ್ಲ ಎನ್ನುವುದಕ್ಕೆ ಉದಾಹರಣೆಯಾಗಿ ಸಭ್ಯ ಸಂಸಾರಸ್ಥ ನಿರ್ದೇಶಕರಾದ ಸುಂದರ್ ಅವರಿದ್ದಾರೆ. ಸುಂದರೇಶನ ಬಲೆಗೆ ಬೀಳುವುದಕ್ಕಾಗಿ ಕುಂದಾಪುರದಿಂದ ಮದ್ರಾಸಿಗೆ ಆಗಮಿಸಿದ ಸರಳ ಮತ್ತು ವಿಮಲ ಎಂಬ ಸಹೋದರಿಯರನ್ನು ಅವರೇ ರಕ್ಷಿಸಿದ್ದರು. ಅವರು ಸಿನಿಮಾರಂಗದಲ್ಲಿ ಯಶಸ್ವಿಯಾಗಿದ್ದರು. ಈಗ ಆ ಹುಡುಗಿಯರು ತಂದೆ ತಾಯಿಯನ್ನು ಕರೆಸಿ ನೆಮ್ಮದಿಯಿಂದ ಬದುಕುತ್ತಿದ್ದಾರೆ. ಅವರು ತಮ್ಮ ಶೀಲವನ್ನು ಬಲಿಕೊಡಬೇಕಾಗಿ ಬರುವುದಿಲ್ಲ. ಹೀಗೆ ಈ ರಂಗದ ಎಲ್ಲ ಬಗೆಯ ಬದುಕುಗಳನ್ನು ನವಗಿರಿನಂದರು ಚಿತ್ರಿಸಿದ್ದಾರೆ.

ಮದ್ರಾಸಿನಲ್ಲಿ ಅಜ್ಞಾತನಾಗಿ ಬದುಕುತ್ತಿದ್ದ ದಾಮೋದರನು ತನ್ನ ಸಂಪಾದನೆಯನ್ನೆಲ್ಲ ಹೆಂಗಸರ ಮೇಲೆ ಸುರಿಯುತ್ತಿದ್ದ. ಒಮ್ಮೆ ಸುಂದರೇಶನು ದಾಮೋದರನಿಂದ 100 ರೂಪಾಯಿ ಪಡೆದು ಅವನನ್ನು ರಾಧಾರಮಣಿಯ ಕೋಣೆಗೆ ಕಳುಹಿಸುತ್ತಾನೆ. ಅಣ್ಣ ತಂಗಿಯ ಮುಖಾಮುಖಿ ಆ ರೀತಿ ಆಗಿ ಅವರ ಅಧಃಪತನ ಸಂಪೂರ್ಣವಾಗುತ್ತದೆ. ಹಾಗೆಯೇ ಅವರಿಬ್ಬರ ಪ್ರತ್ಯೇಕ ಕಥಾನಕಗಳ ಎಳೆಗಳೂ ಒಂದಾಗುತ್ತವೆ.

ಈ ನಡುವೆ ಆದರ್ಶಪ್ರಾಯವಾದ ಸಂಸಾರವೊಂದು ಊರಿನಲ್ಲಿ ರೂಪುಗೊಂಡಿರುತ್ತದೆ. ಊರಿನಲ್ಲಿ ಶಿಕ್ಷಕನಾಗಿದ್ದ ಕೇಶವನು ತನ್ನ ಸಹೋದ್ಯೋಗಿಯಾಗಿದ್ದ ವಿಧವೆ ಪ್ರಮೀಳಾಳನ್ನು ಮದುವೆಯಾಗುತ್ತಾನೆ. ಅವಳು ಹಲವಾರು ಆದರ್ಶಗಳನ್ನು ಕಟ್ಟಿಕೊಂಡು ಸಮಾಜ ಸೇವೆ ಮಾಡುತ್ತಿದ್ದವಳು. ಅವರಿಬ್ಬರ ಮದುವೆಗೆ ರಾಮಪ್ಪಯ್ಯ ವಿರೋಧವಾಗಿದ್ದುದರಿಂದ ಅವರು ಅದೇ ಊರಿನಲ್ಲಿ ಬೇರೆ ಸಂಸಾರ ಹೂಡುತ್ತಾರೆ. ರಾಮಪ್ಪಯ್ಯ ಕೇಶವನಿಗೂ, ದಾಮೋದರನಿಗೂ ಆಸ್ತಿಯಲ್ಲಿ ಪಾಲಿಲ್ಲವೆಂದು ಉಯಿಲು ಮಾಡುತ್ತಾರೆ. ಅವರು ಬದುಕಿನಲ್ಲಿ ಸೋತು ಆರೋಗ್ಯ ಕೆಡಿಸಿಕೊಂಡು ಸಾವಿನಂಚಿಗೆ ಸರಿದಾಗ ಅವರಿಗೆ ದಾಮೋದರ ಮತ್ತು ಪ್ರೇಮಾವತಿಯರ ಆದರ್ಶ ಸಂಸಾರದ ಕಡೆಗೆ ಗಮನ ಹೋಗುತ್ತದೆ. ಅವರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ಉಯಿಲನ್ನು ರದ್ದುಪಡಿಸಿ, ಕೇಶವನನ್ನು ಬಳಿಗೆ ಕರೆಸಿಕೊಳ್ಳುತ್ತಾರೆ. ದಾಮೋದರ ತನ್ನ ತಪ್ಪನ್ನು ತಿದ್ದಿಕೊಂಡು ಪದ್ಮಾವತಿಗೆ ನಿಷ್ಠನಾಗಿರುವ ನಿರ್ಧಾರ ಮಾಡುತ್ತಾನೆ.

ಪ್ರೇಮಾವತಿ ಮತ್ತು ತನ್ನ ನಡುವೆ ಗಂಡ ಹೆಂಡತಿಯ ಸಂಬಂಧ ಸಾಧ್ಯವಿಲ್ಲವೆಂದು ಮಾಧವ ಅವಳ ಕರ್ಮಕಾಂಡದ ವಿವರ ತಿಳಿಯುವ ಮೊದಲೇ ನಿರ್ಧರಿಸಿರುತ್ತಾನೆ. ಆದರೆ ಅವಳಿಗೆ ಹೊಸಜೀವನ ಕಲ್ಪಿಸಲು ಮುಂದಾಗಿ ಅವಳನ್ನು ನರ್ಸಿಂಗ್ ಕಾಲೇಜಿಗೆ ಸೇರಿಸುತ್ತಾನೆ. ಅವಳು ನರ್ಸಿಂಗ್ ಕಲಿತು ತನ್ನ ಗಂಡನ ಆಸ್ಪತ್ರೆಯಲ್ಲಿ ನರ್ಸ್ ಆಗಿ ಸಮಾಜ ಸೇವೆ ಸಲ್ಲಿಸಲು ನಿರ್ಧರಿಸುತ್ತಾಳೆ. (ನವಗಿರಿನಂದರ 'ನತದೃಷ್ಟೆ' ಕಾದಂಬರಿಯ ನಾಯಕಿ ಕುಸುಮಾ ಕೂಡ ಗಂಡನಿಂದ ವಂಚಿಸಲ್ಪಟ್ಟು ನಂತರ ನರ್ಸಿಂಗ್ ಕಲಿತು ನರ್ಸ್ ಆಗುವುದೇ ಕಾದಂಬರಿಯ ಮುಕ್ತಾಯವಾಗಿರುವುದನ್ನು ಇಲ್ಲಿ ಉಲ್ಲೇಖಿಸಬಹುದು).

ನವಗಿರಿನಂದರ 'ಪ್ರೇಮಾವತಿ' ಕಾದಂಬರಿ ನವೋದಯ ಮಾದರಿಯ ಕಥಾನಕವಾಗಿದೆ. ಕಾದಂಬರಿಯ ಶೀರ್ಷಿಕೆ ಪ್ರಾರಂಭದ ಕನ್ನಡ ಕಾದಂಬರಿಗಳಿಗಿದ್ದಂತೆ ನಾಯಕಿಯ ಹೆಸರಾಗಿದೆ. ಆಧುನಿಕ ಶಿಕ್ಷಣ, ಸಿನಿಮಾದಂತಹ ಆಧುನಿಕ ಆಕರ್ಷಣೆಗಳು ಮತ್ತು ನಗರದ ಬದುಕು ಮಧ್ಯಮ ವರ್ಗದವರ ಬದುಕಿನ ಮೇಲೆ ಬೀರಿದ ಪ್ರಭಾವವನ್ನು ಈ ಕಾದಂಬರಿ ಹೇಳುತ್ತದೆ. ಆಧುನಿಕತೆಯ ಪ್ರವೇಶಕ್ಕೆ ಸಂಬಂಧಿಸಿದ ಕೃತಿಗಳು ಎದುರಿಸುವ ಒಂದು ಮುಖ್ಯ ಪ್ರಶ್ನೆಯೆಂದರೆ